3	Mysore Phase-I	BSUP	2738
4	Mysore Phase II	BSUP	2500
	ರಾಜ್ಯದ 25 ನಗರ/ ಪಟ್ಟಣಗಳಲ್ಲಿ	IHSDP	13033

2. ಈ ಪ್ರದೇಶಗಳಲ್ಲಿ ಆಕ್ರಮ ಭೂಮಿ ಒತ್ತುವರಿ ಭೂಮಿಯನ್ನು ಹಾಗೂ ಸರ್ಕಾರಿ ಭೂಮಿಯಲ್ಲಿ ನಗರವಾಸಿ ಬಡಕುಟುಂಬಗಳಿಗೆ ಮನೆ ನಿವೇಶನಗಳನ್ನು ಒದಗಿಸಲು ಕ್ರಮ ಜರುಗಿಸುವುದೇ?

ನಗರ ಪ್ರದೇಶಗಳಲ್ಲಿ ಮಂಡಳಿ ವತಿಯಿಂದ ಘೋಷಿಸಲ್ಪಟ್ಟ ಪ್ರದೇಶಗಳನ್ನು ಹೊರತುಪಡಿಸಿ ಉಳಿದಂತೆ ಆಕ್ರಮ ಭೂಮಿ ಒತ್ತುವರಿ ಭೂಮಿಯನ್ನು ಹಾಗೂ ಸರ್ಕಾರಿ ಭೂಮಿಯಲ್ಲಿ ನಗರ ವಾಸಿ ಬಡ ಕುಟುಂಬಗಳಿಗೆ ಮನೆ/ ನಿವೇಶನಗಳನ್ನು ಒದಗಿಸಲು ಮಂಡಳಿಗೆ ಅವಕಾಶವಿರುವುದಿಲ್ಲ.

3. ನಗರ ಪ್ರದೇಶಗಳಲ್ಲಿ ಗುಣಮಟ್ಟದ ವಸತಿ ಸಮುಚ್ಚಯಗಳನ್ನು ನಿರ್ಮಿಸಿ ಹಂಚುವ ಕುರಿತಾದ ವಸತಿ ಯೋಜನೆಗೆ ತ್ವರಿತ ಚಾಲನೆ ನೀಡುವುದು?

ಮೇಲ್ಕಂಡ ಯೋಜನೆಗಳಲ್ಲಿ ಹಾಲಿ ಇರುವ ಕೊಳಚೆ ಪ್ರದೇಶಗಳಲ್ಲಿಯೇ ಒಳ್ಳೆಯ ಗುಣಮಟ್ಟದ ಮನೆಗಳನ್ನು ನಿಗಧಿತ ಅವಧಿಯಲ್ಲಿ ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

ವಇ 01 ಕೊಮಂವಿ 09

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು

ಕರ್ನಾಟಕ ವಿಧಾನ ಸಭೆ

298 ಶ್ರೀ ಹ್ಯಾರೀಸ್ ಎನ್.ಎ[ಶಾಂತಿನಗರ]
ಇಂಧನ ಸಚಿವರು.

ಅ). ರಾಜ್ಯದಲ್ಲಿ ಜೈವಿಕ ಇಂಧನ ಆಧಾರಿತ ವಿದ್ಯುತ್ ಕೇಂದ್ರಗಳು ಮತ್ತು ಸಕ್ಕರೆ ಕಾರ್ಖಾನೆಗಳು ಸೇರಿದಂತೆ ಖಾಸಗಿ ವಿದ್ಯುತ್ ಕಂಪನಿಗಳು ಉತ್ಪಾದಿಸುತ್ತಿರುವ ವಿದ್ಯುತ್ ಪ್ರಮಾಣದ ವಿವರಗಳೇನು?

ರಾಜ್ಯದಲ್ಲಿ ಜನವರಿ 2009 ರಲ್ಲಿ ಜೈವಿಕ ಇಂಧನ ಆಧಾರಿತ ವಿದ್ಯುತ್ ಕೇಂದ್ರಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಪ್ರಮಾಣ 30.86 ದಶಲಕ್ಷ ಯೂನಿಟ್ಟುಗಳು ಮತ್ತು ಸಕ್ಕರೆ ಕಾರ್ಖಾನೆಗಳ ಸಹ ವಿದ್ಯುತ್ ಉತ್ಪಾದನಾ ಘಟಕಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಪ್ರಮಾಣ 165.17 ದಶಲಕ್ಷ ಯೂನಿಟ್ಟುಗಳೂ ಸೇರಿದಂತೆ ಖಾಸಗಿ ವಿದ್ಯುತ್ ಕಂಪನಿಗಳು ಜನವರಿ 2009 ರಲ್ಲಿ ಉತ್ಪಾದಿಸಿದ ವಿದ್ಯುತ್ತಿನ ಒಟ್ಟು ಪ್ರಮಾಣ 594.83 ದಶಲಕ್ಷ ಯೂನಿಟ್ಟುಗಳು.

ಆ). ಅವುಗಳಿಂದ ಹೊರ ರಾಜ್ಯಗಳಿಗೆ ಮಾರಾಟವಾಗುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು ಕರ್ನಾಟಕದಿಂದ ಪಡೆದ ವಿದ್ಯುತ್‌ನ್ನು ಪುನಃ ಕರ್ನಾಟಕದ ವಿತರಣಾ ಕಂಪನಿಗಳಿಗೆ ಹೆಚ್ಚಳ ದರದಲ್ಲಿ ಮಾರಾಟ ಮಾಡುತ್ತಿರುವ ಕುರಿತು ಸರ್ಕಾರದಲ್ಲಿ ಉಪಲಬ್ಧವಿರುವ ವಿವರಗಳೇನು?

ಇ). ಈ ಖಾಸಗಿ ಕಂಪನಿಗಳು ಮುಕ್ತ ವಿದ್ಯುತ್ ಮಾರಾಟ ನೀತಿಯಿಂದಾಗಿ ಕೊರತೆ ಎದುರಿಸುತ್ತಿರುವ ಈ ರಾಜ್ಯಕ್ಕೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಲು ಮುಂದಾಗುವುದೇ?

ಆ) ಮತ್ತು ಇ)

ಸರ್ಕಾರದ ದಿನಾಂಕ 30–12–2008 ರ ಆದೇಶದಂತೆ ಯಾವುದೇ ಖಾಸಗಿ ವಿದ್ಯುತ್ ಉತ್ಪಾದಕರು ಹೊರ ರಾಜ್ಯಗಳಿಗೆ ಮುಕ್ತ ಮಾರಾಟದನ್ವಯ ವಿದ್ಯುತ್ ಮಾರಾಟ ಮಾಡುವಂತಿಲ್ಲ. ತಮ್ಮಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ತನ್ನು ರಾಜ್ಯದ ವಿದ್ಯುತ್ ಜಾಲಕ್ಕೆ ಮಾತ್ರ ನೀಡಲು ಸೂಚಿಸಲಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ 17–12–2008 ರಂದು ಆದೇಶ ಹೊರಡಿಸಿ ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ಗರಿಷ್ಠ ರಫ್ತು ಮಾಡುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೇ ನೀಡಬೇಕೆಂದು ಆದೇಶ ನೀಡಿದೆ. ಕರ್ನಾಟಕ ಸರ್ಕಾರವು ಅದೇ ದಿನದಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರುಗಳಿಗೆ 1–12–2008 ರಿಂದ ಅನ್ವಯವಾಗುವಂತೆ ತಾವು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡುವ ವಿದ್ಯುತ್‌ಗೆ ಯೂನಿಟ್ ಒಂದಕ್ಕೆ ರೂ.7.25 ಅನ್ನು ನಿಗದಿಪಡಿಸಿ ಮೇ–2009 ರವರೆಗೆ ಖರೀದಿಸಲು ಆದೇಶ ನೀಡಲಾಗಿದೆ.

ಮುಂದುವರೆದು, ಆಮದು ಕಲ್ಲಿದ್ದಲಿನ ಬೆಲೆಯಲ್ಲಿನ ಇಳಿಕೆಯು ಸೇರಿದಂತೆ ಕಬ್ಬಿನ ಸಿಪ್ಪೆ ಮತ್ತು ವಿದ್ಯುತ್ತನ್ನು ಉತ್ಪಾದಿಸಲು ಬಳಸುವ ಇತರೆ ಸಾಮಗ್ರಿಗಳ ದರಗಳಲ್ಲಿ ಆಗಿರುವ ಪರಷ್ಕರಣೆಯ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ದಿನಾಂಕ 27–1–2009 ರಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಕಾರ್ಖಾನೆಗಳಿಗೆ ನೀಡುವ ಪ್ರತಿ ಯೂನಿಟ್ ದರವನ್ನು ರೂ.6.50 ಕ್ಕೆ ಕಡಿಮೆ ಮಾಡಿ ಅದನ್ನು ಖರೀದಿಸಲು ಅನುಮೋದನೆ ನೀಡಿದೆ. ಈ ದರವು 1–1–2009 ರಿಂದ 31–5–2009 ರವರೆಗೆ ಚಾಲ್ತಿಯಲ್ಲಿರುತ್ತದೆ.

ಕರ್ನಾಟಕ ಸರ್ಕಾರದ ಮೇಲ್ಕಂಡ ಆದೇಶದ ಪ್ರಕಾರ ಎಲ್ಲಾ ಸಹ ಸಕ್ಕರೆ ವಿದ್ಯುತ್ ಕಾರ್ಖಾನೆಗಳು ಕರ್ಣಾಟಕದ ವಿದ್ಯುತ್ ಜಾಲಕ್ಕೇ ಈಗ ವಿದ್ಯುತ್ತನ್ನು ಸರಬರಾಜು ಮಾಡುತ್ತಿವೆ.

ಸಂಖ್ಯೆ: ಇಎನ್ 19 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.